ಅಸಲು ದಾವಾ ನಂಃ 46/2024
ಡಿ ಡಬ್ಲ್ಯುಃ2

<u>ದಿನಾಂಕಃ **12-03-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ರವರ ಪರ ಶ್ರೀಮತಿ ಎಸ್.ಬಿ ವಕೀಲರಿಂದಃ</u>

ನಾನು ಡಿಸಂಬರ್ 2025 ರಿಂದ ಪ್ರತಿವಾದಿ ಮಠದಲ್ಲಿ ಕೆಲಸ ಮಾಡುತ್ತಾ ಇರುತ್ತೇನೆ. ನನಗೆ ನಮ್ಮ ಮಠದ ಆಸ್ತಿಗಳು ಎಲ್ಲಿ ಇರುತ್ತದೆ ಎಂಬುದರ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಈ ಕೇಸಿನ ಆಸ್ತಿಯ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಿಪಿ-5 ರಲ್ಲಿ ಶಿವಲಿಂಗಪ್ಪ ಇವರ ಹೆಸರು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನಮೂದು ಆಗಿದ್ದು ಅದನ್ನು ಪ್ರಶ್ನೆ ಮಾಡಿ ನಾವು ಕಂದಾಯ ಅಧಿಕಾರಿಗಳು ಮತ್ತು ತಹಶೀಲ್ದಾರ್ ಮುಂದೆ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರ ತಂದೆ ತಪ್ಪೊಪ್ಪಿಗೆ ಪತ್ರ ಬರೆದುಕೊಡುವ ಒಂದು ವಾರದ ಮುಂಚೆ ಅವರಿಗೆ ದಾವಾ ಆಸ್ತಿಯ ಸಂಬಂಧ ಗ್ರಾಂಟ್ ಸರ್ಟಿಫಿಕೇಟ್ ನೀಡಿರುವ ಬಗ್ಗೆ ಗೊತ್ತಾಗಿರುತ್ತದೆ. ನಮ್ಮ ಪ್ರತಿವಾದ ಪತ್ರದಲ್ಲಿ ವಾದಿಯರ ತಂದೆ ನಮ್ಮ ಮಠಕ್ಕೆ ತಪ್ಪೊಪ್ಪಿಗೆ ಪತ್ರ ಬರೆದುಕೊಟ್ಟಿರುತ್ತಾರೆಂದು ಎಲ್ಲಿಯೂ ಹೇಳಿರುವುದಿಲ್ಲ ಎಂದರೆ ಸರಿ.

2. ಗ್ರಾಂಟ್ ಸರ್ಟಿಫೀಕೆಟ್ ವಾದಿಯರ ತಂದೆಗೆ ನೀಡಿರುವುದು ಫೇಕ್ ಎಂದು ಯಾವ ಆಧಾರದ ಮೇಲೆ ಹೇಳಿರುತ್ತೀರಿ ಎಂದರೆ ಸಾಕ್ಷಿ ನಾವು ಸ್ವಾಧೀನದಲ್ಲಿರುವ ಕಾರಣ ಅದು ಫೇಕ್ ಎಂದು ಹೇಳಿರುತ್ತೇನೆ. ಗ್ರಾಂಟ್ ಸರ್ಟಿಫೀಕೆಟ್ ಅನ್ನು ಫೇಕಾಗಿ ಪಡೆದಿರುತ್ತಾರೆ ಎಂದು ನಾವು ವಾದಿಯರ ತಂದೆಯ ವಿರುದ್ಧ ಯಾವುದೇ ದೂರನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ವಾದಿಯರ ತಂದೆ ತಪ್ಪೊಪ್ಪಿ ಗೆ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ನಾನು ಕೇವಲ ಮೌಖಿಕವಾಗಿ ಹೇಳುತ್ತಾ ಇದ್ದೇನೆ ಎಂದರೆ ಸರಿಯಲ್ಲ. ನಿಡಿ-3 ಒಂದು ಲೆಕ್ಕಪತ್ರದ ಪುಸ್ತಕ ಇರುತ್ತದೆ ಎಂದೆರೆ ಸರಿ. ನಿಡಿ-3 ರಲ್ಲಿ ಯಾವ್ಯಾವ ದಿನಾಂಕದಂದು ಎಷ್ಟು ಹಣ ಕೊಟ್ಟಿರುತ್ತಾರೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಿಡಿ-3 ರ ಕೊನೆಯ ಪುಟದಲ್ಲಿ ತಪ್ಪೊಪ್ಪಿಗೆ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸಾಮಾನ್ಯವಾಗಿ ಯಾವ ಒಬ್ಬ ವ್ಯಕ್ತಿ ತಪ್ಪೊಪ್ಪಿಗೆ ಪತ್ರ ಬರೆದುಕೊಟ್ಟರೆ ಲೆಕ್ಕ ಪುಸ್ತಕದಲ್ಲಿ ಬರೆಯುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನಿಡಿ-3 ರಲ್ಲಿ ನಾವೇ ತಪ್ಪೊಪ್ಪಿಗೆ ಪತ್ರ ವನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

3. ವಾದಿಯರ ತಂದೆ 2025 ರಲ್ಲಿ ತೀರಿಕೊಂಡಿರಬಹುದು. ಸದರಿ ಶಿವಲಿಂಗಪ್ಪ ಇವರು ಮಠದ ಶಿವಾನಂದ್ ಎಸ್ಟೇಟ್‌ನಲ್ಲಿ ರೈಟರ್ ಆಗಿ ಕೆಲಸ ಮಾಡುತ್ತಿದ್ದರು. ನನಗೆ ಶಿವಲಿಂಗಪ್ಪ ಇವರ ಕೆಲಸ ಕಾರ್ಯಗಳ ಬಗ್ಗೆ ವೈಯಕ್ತಿಕವಾಗಿ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಾನು ರಂಭಾಪುರಿ ಮಠದಲ್ಲಿ 15 ವರ್ಷಗಳಿಂದ ಕೆಲಸ ಮಾಡುತ್ತಾ ಇರುತ್ತೇನೆ. ನಾನು ಮಠದಲ್ಲಿ 15 ವರ್ಷಗಳಿಂದ ಕೆಲಸ ಮಾಡುತ್ತಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ತಂದು ಹಾಜರು ಪಡಿಸಲು ತೊಂದರೆ ಇರುವುದಿಲ್ಲ. ಶಿವಲಿಂಗಪ್ಪ ಇವರು ದಾವಾ ಆಸ್ತಿಯನ್ನು ಮಠಕ್ಕೆ ಕೊಟ್ಟಿರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ದಾವಾ ಆಸ್ತಿ ಎಷ್ಟು ವರ್ಷಗಳಿಂದ ನಮ್ಮ ಸ್ವಾ ಧೀನದಲ್ಲಿ ಇರುತ್ತದೆ ಎಂದು ಹೇಳಲಾಗುವುದಿಲ್ಲ. ಸಾಕ್ಷಿ ಮುಂದುವರೆದು ಕಾಫಿ ತೋಟ ಹಾಕಿದಾಗಿನಿಂದ ನಮ್ಮ ಸ್ವಾಧೀನದಲ್ಲಿ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿಯ ಪೂರ್ವಕ್ಕೆ ನಮ್ಮ ಮಠದ ಆಸ್ತಿ ಇದ್ದು ಉಳಿದ ದಿಕ್ಕುಗಳಲ್ಲಿ ಯಾರ ಆಸ್ತಿ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

4. ವಾದಿಯರು ದಾವೆಯಲ್ಲಿ ಯಾವ ಯಾವ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆಂದು ನಾನು ನೋಡಿರುವುದಿಲ್ಲ. ದಾವಾ ಆಸ್ತಿಗೆ ಎಷ್ಟು ರೆವಿನ್ಯೂ ಅಸೆಸ್ ಮೆಂಟ್ ನಿರ್ಧರಿಸಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ.

<u>ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯ ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ